**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ</u>**

<u>ಸಿ.ಸಿ. ನಂ.40/2013</u>

CW-10/PW-2

| | | |
|---|---|---|
| ಹೆಸರು | ಃ- | ರಾಜು |
| ತಂದೆ ಹೆಸರು | ಃ- | ಚಿಕ್ಕಮೊಗೆಗೌಡ |
| ವಯಸ್ಸು | ಃ- | 43 ವರ್ಷ |
| ವೃತ್ತಿ | ಃ- | ಪೇದೆ , ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ. |
| ವಾಸ ಸ್ಥಳ | ಃ- | ರಾಮನಗರ. |
| ದಿನಾಂಕ | ಃ- | 20.06.2024 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ನಾನು 2011 ರಿಂದ 2015 ರವರೆಗೆ ರಾಮನಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿತ್ತಿದ್ದೆನು.

2. ದಿನಾಂಕಃ 27.02.2013 ರಂದು ರಾಮನಗರ ಗ್ರಾಮಾಂತರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆಃ 64/2013 ರಲ್ಲಿ ಅರೋಪಿ ಹಾಗೂ ಮಾಲು ಪತ್ತೆಗಾಗಿ ನನ್ನನ್ನು ಮತ್ತು ಪೊಲೀಸ್ ಪೇದೆ ದೀಪಕ್‌ರವರನ್ನು ನೇಮಿಸಿದ್ದು, ಅದರಂತೆ ನಾವು ದಿನಾಂಕಃ 28.02.2013 ರಂದು ರಾಮನಗರ ಟೌನ್ ವಿನಾಯಕ ನಗರದಲ್ಲಿ ಬೇಕರಿ ಮಂಜುನಾಥರವರ ಮನೆಯ ಬಳಿ ಹೋಗಿ ಆರೋಪಿ ಆನಂದ್ ಅವರ ಮನೆಯ ಮುಂದೆ ಇದ್ದು ಅವರನ್ನು ಮಧ್ಯಾಹ್ನ 2.00 ಗಂಟೆಗೆ ನಮ್ಮ ವಶಕ್ಕೆ ಪಡೆದು ಅವರನ್ನು ಪಿ.ಎಸ್.ಐ. ಇವರು ವಿಚಾರಣೆ ಮಾಡಿದಾಗ ದಿನಾಂಕಃ 17.02.2013 ರಂದು ನಾನು

ಮತ್ತು ಬೆಂಗಳೂರಿನ ಗಣೇಶ ಮತ್ತು ಸುರೇಶ್ ರವರು ನಮ್ಮ ಅಜ್ಜಿಯ ಚೈನ್ನನ್ನು ಕಿತ್ತುಕೊಂಡು ತಾಳಿ ಮತ್ತು ಗುಂಡುಗಳನ್ನು ರಸ್ತೆಯಲ್ಲಿ ಬಿಸಾಡಿ, ಚೈನ್ನನು ನಾನೇ ಧರಿಸಿರುತ್ತೇನೆಂದು ಆರೋಪಿ ಆನಂದ್ ಹೇಳಿದರು ಅದನ್ನು ಪಿ.ಎಸ್.ಐ. ರವರು ಮಹಜರ್ ಮುಖಾಂತರ ಅಮಾನತು ಪಡಿಸಿಕೊಂಡು ಚೈನ್ನನ್ನು ಮತ್ತು ಆರೋಪಿಯನ್ನು ಸಿ.ಪಿ.ಐ.ರವರಿಗೆ ವಹಿಸಿದರು. ಸದರಿ ಮಹಜರ್‌ನ್ನು ನೋಡಿದರೆ ಗುರುತಿಸಬಲ್ಲೆ, ಮಹಜರ್ ಕಡತದಲ್ಲಿ ಕಂಡುಬರುವುದಿಲ್ಲ. ಚೈನ್ನನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಚೈನ್ನನ ಫೋಟೋಗಳನ್ನು ನಿಪಿ--21 ಎಂದು ಒಟ್ಟಾಗಿ ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ, ಆರೋಪಿ ಆನಂದನ ಹೇಳಿಕೆಯ ಮೇರೆಗೆ ಉಳಿದ ಆರೋಪಿತರಾದ ಗಣೇಶ @ ದೊಣ್ಣೆ, ಸುರೇಶ ಮತ್ತು ಉಮೇಶರವರನ್ನು ಕೆಂಗೇರಿಯ ಬಳಿ ವಶಕ್ಕೆ ಪಡೆದರು ಎಂದು ನುಡಿಯುತ್ತಾರೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಲೋಕೇಶ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.